ದಿವಾಣಿ ನ್ಯಾಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ
ದಂಡಾಧಿಕಾರಿಗಳ ನ್ಯಾಯಾಲಯ, ಕಿತ್ತೂರ

ದಿನಾಂಕಃ 22.06.2026 ರಂದು ಪಿ.ಡಬ್ಲ್ಯೂ-1ರವರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 4 ನೇ ಪ್ರತಿವಾದಿ ಪರ ಶ್ರೀ ವಿ ಜಿ ಬಿ ವಕೀಲರಿಂದಃ**

1. ರಾಜಗುರು ಸಂಸ್ಥಾನ ಮಠ ಕಲ್ಮಠದಲ್ಲಿ 4 ನೇ ಪ್ರತಿವಾದಿ ಪೀಠಾಧಿಪತಿಗಳು ಎಂದರೆ ಸರಿ. ಸದರಿ ಮಠ ಪುರಾತನ ಕಾಲದಿಂದ ಇದೆ ಎಂದರೆ ಸರಿ. ಸದರಿ ಮಠದ ಪೀಠಾಧಿಪತಿಗಳು ರಾಣಿ ಚೆನ್ನಮ್ಮನ ಕಾಲದಿಂದಲೂ ಮಾರ್ಗದರ್ಶನದಿಂದ ಸಂಸ್ಥಾನ ನಡೆಸುತ್ತಿದ್ದರು ಎಂದರೆ ಸರಿ. ಸದರಿ ಪೀಠಾಧಿಪತಿಗಳು ಧರ್ಮದ ಪ್ರಚಾರ ಮತ್ತು ಮಾರ್ಗದರ್ಶನ ಮಾಡುತ್ತಾ ಬಂದಿದ್ದಾರೆ ಎಂದರೆ ಸರಿ . ಸದರಿಯವರು ಎಮ್ ಎ ಸಮಾಜಶಾಸ್ತ್ರ ಪದವಿಧರರು ಎಂದರೆ ಸರಿ. ನನ್ನ ಅಜ್ಜ ಶಂಕರ ಮಠಕ್ಕೆ ದಾನ ಮಾಡಿದ ಆಸ್ತಿಯ ಸರ್ವೆ ನಂಬರ ಗೊತ್ತಿಲ್ಲ, ಅದು 3 ಎಕರೆ 2 ಗುಂಟೆ ಇದೆ. 2013 ರಲ್ಲಿ ಸದರಿ ಆಸ್ತಿಯನ್ನು ದಾನ ಮಾಡಲಾಗಿದೆ.

2. ನಿಡಿ-1 ಮತ್ತು ನಿಡಿ-2 ರ ದಾಖಲೆಗಳ ಬಗ್ಗೆ ಗೊತ್ತಿದೆ. ನಿಡಿ-2 ರಲ್ಲಿ ಷರತ್ತುಗಳನ್ನು ನಮೂದಿಸಲಾಗಿದೆ ಎಂದರೆ ಸರಿ. ಸದರಿ ಮಠದವರು 1 ನೇ ತರಗತಿಯಿಂದ 10 ನೇ ತರಗತಿಯ ವಿದ್ಯಾರ್ಥಿಗಳಿಗೆ ಶಾಲೆ ನಡೆಸುತ್ತಿದ್ದಾರೆ ಎಂದರೆ ಸರಿ. ಐಟೆಮ ನಂಬರ 2 ನೇ ದಾವಾ ಆಸ್ತಿಯನ್ನು ಸದರಿ ಶಾಲೆಗೆ ಪ್ರಸಾದ ನಿಲಯ ಮಾಡಲು ಕೊಟ್ಟಿದ್ದಾರೆ ಎಂದರೆ ಸರಿ ಮತ್ತು ಸದರಿ ಆಸ್ತಿಯಿಂದ ಬಂದ ಉತ್ಪನ್ನವನ್ನು ಪ್ರಸಾದಕ್ಕಾಗಿ ಉಪಯೋಗಿಸುತ್ತಾರೆ ಎಂದರೆ ಸರಿ. ಮಠದ ಹಿಂದೆ ಪ್ರಸಾದ ನಿಲಯ ಕಟ್ಟಿಸಲಾಗಿದೆ ಎಂದರೆ ಸರಿ. ಸುಮಾರು 70 ಲಕ್ಷ ಸದರಿ ಪ್ರಸಾದ ನಿಲಯ ಕಟ್ಟಿಸಲು ವೆಚ್ಚ ಮಾಡಲಾಗಿದೆ ಎಂದರೆ ಗೊತ್ತಿಲ್ಲ. ಸದರಿ ಪ್ರಸಾದ ನಿಲಯಕ್ಕೆ ಶಂಕರ ಚಂದರಗಿ ಪ್ರಸಾದ ನಿಲಯ ಮತ್ತು ಸಭಾಗೃಹ ಎಂದು ಹೆಸರು ಇಡಬೇಕು ಎಂದು ಷರತ್ತು ಮಾಡಲಾಗಿದೆ ಎಂದರೆ

ಸರಿ. ಆದ್ದರಿಂದ ಸದರಿ ಹೆಸರನ್ನೆ ಪ್ರಸಾದ ನಿಲಯಕ್ಕೆ ಇಡಲಾಗಿದೆ ಎಂದರೆ ಗೊತ್ತಿಲ್ಲ.

3. ಸದರಿ ಆಸ್ತಿಯನ್ನು ದಾನ ಮಾಡಿದ ಬಗ್ಗೆ ನಮ್ಮ ಕುಟುಂಬದ ಸದಸ್ಯರೇಲ್ಲಾ ದಾನ ಪತ್ರ ಮಾಡಿದ ದಿನದಿಂದ ಮಾತನಾಡಿಕೊಳ್ಳುತ್ತಿದ್ದೆವು ಎಂದರೆ ಸರಿ. ನಂತರದಲ್ಲಿ ಹಿರಿಯರು, ಪೀಠಾಧಿಪತಿಗಳು ಮತ್ತು ಶಾಸಕರ ಸಮಕ್ಷಮ ನನ್ನ ಅಜ್ಜನ ಸನ್ಮಾನ ಮಾಡಲಾಯಿತು ಎಂದರೆ ನಾನು ಇರಲಿಲ್ಲ ಎಂದು ನುಡಿಯುತ್ತಾರೆ. ಪ್ರತಿ ಕಾರ್ಯಕ್ರಮಗಳಲ್ಲಿ ಸದರಿ ಪ್ರಸಾದ ನಿಲಯದ ಹೆಸರನ್ನು ಬಳಸಲಾಗುತ್ತಿದೆ ಎಂದರೆ ನನಗೆ ಗೊತ್ತಿಲ್ಲ. ನಿಡಿ-4 ರಿಂದ 22 ಭಾವಚಿತ್ರದ ಕಾರ್ಯಕ್ರಮಗಳಲ್ಲಿ ಅಜ್ಜ-ಅಜ್ಜಿ ಮತ್ತು ನಮ್ಮ ಕಟುಂಬದ ಸದಸ್ಯರು ಭಾಗಿಯಾಗಿದ್ದಾರೆ ಎಂದರೆ ಸರಿ. ನಿಡಿ-1 ರ ದಾನ ಪತ್ರವನ್ನು ಎಲ್ಲಿಯೂ ಪ್ರಶ್ನೆ ಮಾಡಿಲ್ಲ. ಸದರಿ ಆಸ್ತಿಯನ್ನು ಬಿಟ್ಟು ಬೇರೆ ಆಸ್ತಿಗಳು ಇವೆ, ಅವುಗಳಿಗಾಗಿ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿ. ಆದ್ದರಿಂದ ಸದರಿ ಆಸ್ತಿಯನ್ನು ಬಿಟ್ಟು ನನಗೆ ಬೇರೆ ಆಸ್ತಿಗಳಲ್ಲಿ ಮಾತ್ರ ಹಕ್ಕು ಇದೆ ಎಂದರೆ ಸರಿಯಲ್ಲ.

4. ಸದರಿ 2 ನೇ ಐಟೆಮ ಆಸ್ತಿಯನ್ನು ಖರೀದಿ ಮಾಡುವಾಗ ನನ್ನ ಅಜ್ಜ ಶಂಕರನಿಗೆ ಯಾವುದೇ ಸರ್ಕಾರಿ ನೌಕರಿ ಇರಲಿಲ್ಲ. ಸದರಿಯವರು ಯಾವಾಗ ಕೆಲಸಕ್ಕೆ ಸೇರಿ ನಿವೃತ್ತರಾದರು ಎಂದು ಗೊತ್ತಿಲ್ಲ. ಆದ್ದರಿಂದ ಸದರಿ ವಿಚಾರವನ್ನು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಿತ್ರಾರ್ಜಿತ ಆಸ್ತಿಯಿಂದ ಸದರಿ ಆಸ್ತಿಯನ್ನು ಖರೀದಿ ಮಾಡಲಾಗಿದೆ ಎಂದು ತೋರಿಸಲು ದಾಖಲೆಗಳನ್ನು ಹಾಜರು ಪಡಿಸಿಲ್ಲ. ಸದರಿ ನನ್ನ ಅಜ್ಜ ಎಷ್ಟು ಸಾಲ ಯಾರ ಬಳಿ ಮಾಡಿದ್ದರು ಎಂದು ಗೊತ್ತಿಲ್ಲ. ಆದ್ದರಿಂದ ಸಾಲದ ಬಗ್ಗೆ ಹೇಳಿದ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

5. ನನ್ನ ತಂದೆಗೆ ಆಸ್ತಿಗಳಲ್ಲಿ ಪಾಲು ಕೊಡಿ ಎಂದು ಕೇಳಿಲ್ಲ ಎಂದರೆ ಸರಿಯಲ್ಲ. ಸದರಿ 2 ನೇ ಐಟೆಮ ಆಸ್ತಿ ನನ್ನ ಅಜ್ಜನ ಸ್ವಯಾರ್ಜಿತ ಆಸ್ತಿ, ದಾನು ಮಾಡುವ ಸಂಪೂರ್ಣ ಹಕ್ಕು ಇತ್ತು ಎಂದರೆ ಸರಿಯಲ್ಲ. ಆದ್ದರಿಂದ ನಾವು ಇಲ್ಲಿಯವರೆಗೂ ಸದರಿ ದಾನ ಪತ್ರವನ್ನು ಪ್ರಶ್ನೆ ಮಾಡಿಲ್ಲ ಎಂದರೆ ಸರಿಯಲ್ಲ.

6. ನನ್ನ ಅಜ್ಜನಿಗೆ ಐದು ಜನ ಹೆಣ್ಣುಮಕ್ಕಳು ಈ ದಾವೆಗೆ ಅವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ದಾವೆ ಕಾರಣ ಸುಳ್ಳು ಇದೆ ಎಂದರೆ ಸರಿಯಲ್ಲ. ದಾವೆಯಲ್ಲಿ ಕೇಳಿದ ಪರಿಹಾರ ಪಡೆಯಲು ಅರ್ಹನಲ್ಲ, 4 ನೇ ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

**(ಎರಡನೇ ಪ್ರತಿವಾದಿ ಪರ ವಕೀಲರು ಗೈರು ಹಾಜರು ಇದ್ದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು).**

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಮಹಮ್ಮದ ಅಲಿ ನಾಯಕ)
ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಕಿತ್ತೂರ.